


ಪದ್ಯ

# ತಾಜಾ ಹಣ್ಣು



-ಕಮಲಾಕ್ಷಿ ಹೆಗಡೆ



ತೋಟಕೆ ಹೋಗೋ ತಿಮ್ಮಣ್ಣ
ತಾಜಾ ಹಣ್ಣನು ತಾರಣ್ಣ
ಮಕ್ಕಳಿಗೆಲ್ಲಾ ಬೇಕಣ್ಣ
ತರತರ ಹಣ್ಣನು ತಾರಣ್ಣ ॥

ಮಾವಿನ ಹಣ್ಣು ಬಾಳೆಯ ಹಣ್ಣು
ಹಲಸಿನ ಹಣ್ಣು ಕಿತ್ತಳೆ ಹಣ್ಣು
ಅನಾನಸು ಪಪಾಯಿ ನೇರಳೆ ಹಣ್ಣು
ಮರೆಯದೆ ತಾರೋ ಚಿಕ್ಕು ಹಣ್ಣು ॥

ಸಹಜದ ಕೃಷಿಯಲಿ ಗಿಡವನು ಬೆಳೆಸು
ಸಾವಯವ ಗೊಬ್ಬರ ಬಳಸು
ಕ್ರಿಮಿನಾಶಕಗಳ ದೂರವೆ ಇರಿಸು
ಫಲಗಳ ಕೀಳಲು ಜಾಗ್ರತೆವಹಿಸು ॥



ರೋಗವ ಹರಡುವ ಭೀತಿಯು ಬೇಡ
ಆರೋಗ್ಯ ಕೆಡುವ ಕಾಳಜಿ ಬೇಡ
ಅಪ್ಪಟ ಹಣ್ಣಿನ ಸವಿಯನು ನೋಡ ॥
ತಾಜಾ ಹಣ್ಣಿನ ರುಚಿಯನು ನೋಡ ॥




# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ.

1. ತೋಮ = ಉದ್ಯಾನ (Farm, Estate)
2. ತಾಜಾ = ಹೊಚ್ಚ ಹೊಸದಾದ (Fresh)
3. ಹಣ್ಣು = ಫಲ (Fruit)
4. ತಾರಣ್ಣ = ತೆಗೆದುಕೊಂಡು ಬಾ (Bring)
5. ತರ = ವಿಧ, ಬೇರೆ (Different)
6. ಮರೆಯದೆ = ನೆನಪಿನಲ್ಲಿಟ್ಟುಕೊಂಡು (Remember)
7. ಸಹಜ = ಸ್ವಾಭಾವಿಕ (Natural)
8. ಕೃಷಿ = ವ್ಯವಸಾಯ (Cultivate)
9. ಗಿಡ = ಸಸಿ (Plant)
10. ಕೊಟ್ಟಿಗೆ = ದನಕರು ಸಾಕುವ ಜಾಗ, ಹಟ್ಟಿ (Cow Shed)
11. ಗೊಬ್ಬರ = ಸಗಣಿ (Manure)
12. ಬಳಸು = ಉಪಯೋಗಿಸು (Use)
13. ಕ್ರಿಮಿನಾಶಕ = ಕೀಟನಾಶಕ (Pesticide)
14. ರೋಗ = ಕಾಯಿಲೆ (Disease)
15. ಭೀತಿ = ಭಯ (Fear)

## II. ಪದ್ಯ ಭಾಗಗಳನ್ನು ಪೂರ್ಣ ಮಾಡಿರಿ.



ತೋಟಕೆ ..................................................

..........................................................

..........................................................

.................................................. ತಾರಣ್ಣ

ಸಹಜದ ..............................................................

..............................................................

..............................................................

...................................... ಜಾಗ್ರತೆವಹಿಸು ॥



### III. ವಿರುದ್ಧ ಪದಗಳನ್ನು ಬರೆಯಿರಿ.

1. ಹೋಗು × ______ 2. ಸಹಜ × ______

3. ದೂರ × ______ 4. ಲಾಭ × ______

5. ಜಾಗ್ರತೆ × ______ 6. ಭೀತಿ × ______

7. ಸಿಹಿ × ______ 8. ಬೇಕು × ______

### IV. ಹೊಂದಿಸಿ ಬರೆಯಿರಿ.

| ಅ | ಆ | |
|---|---|---|
| 1. ತಾಜಾ | ಅ. ಕೃಷಿ | |
| 2. ಸಾವಯವ | ಆ. ಹರಡುವ | |
| 3. ಆರೋಗ್ಯ | ಇ. ಹಣ್ಣು | |
| 4. ಸಹಜ | ಉ. ಕೆಡುವ | |
| 5. ರೋಗವ | ಊ. ಗೊಬ್ಬರ | |

### V. ಕೊಟ್ಟಿರುವ ಪದಗಳಿಗೆ ಒತ್ತಕ್ಷರಗಳನ್ನು ಬರೆಯಿರಿ.

ತಿಮಣ, ಹಣನು, ತಿನಲು, ತಾರಣ, ಮಕಳು, ಕಿತಳೆ, ಕೊಟಿಗೆ, ಗೊಬರ, ಕಿಮಿ, ಜಾಗತೆ, ಅಪಟ.

## VI. ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ:

ಉದಾ:

| | |
|---|---|
| 1. ಮಾವು, ಕಬ್ಬು, ಹಲಸು, ಕಿತ್ತಳೆ | ಕಬ್ಬು |
| 2. ತೋಟ, ತಿಮ್ಮಣ್ಣ, ಬಾವಿ, ಮರ | |
| 3. ರೋಗ, ಜ್ವರ, ಮಗು, ಕಾಯಿಲೆ | |
| 4. ಕಹಿ, ಸವಿ, ಸಿಹಿ, ರುಚಿ | |
| 5. ಗಿಡ, ರೋಗ, ಹೂ, ಹಣ್ಣು | |

## VII. ಕೆಳಗಿನ ಅಕ್ಷರಗಳ ಉಚ್ಚಾರಣೆಯನ್ನು ಸರಿಯಾಗಿ ಕಲಿಯಿರಿ.

1. ಹಣ್ಣು
2. ಮಕ್ಕಳು
3. ಬೆಳೆ
4. ಇರಿಸು
5. ಬಳಸು
6. ಬಾಳೆ
7. ತಿನ್ನು
8. ಒಕ್ಕಲು
9. ಬೆಲೆ
10. ಇಳಿಸು
11. ಹಲಸು
12. ಬಾಲೆ

## VIII. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ತೋಟಕ್ಕೆ ಹೋಗುವವರು ಯಾರು?

_______________________________________________

2. ತಿಮ್ಮಣ್ಣ ಎಂತಹ ಹಣ್ಣನ್ನು ತರಬೇಕು?

_______________________________________________

3. ಹಣ್ಣುಗಳು ಯಾರಿಗೆ ಬೇಕು?

_______________________________________________

4. ಗಿಡಗಳನ್ನು ಹೇಗೆ ಬೆಳೆಸಬೇಕು?

_______________________________________________

5. ಗಿಡಗಳಿಗೆ ಯಾವ ಗೊಬ್ಬರವನ್ನು ಬಳಸಬೇಕು?

6. ದೂರ ಇರಿಸಬೇಕಾದ ವಸ್ತು ಯಾವುದು?

7. ಫಲಗಳನ್ನು ಕೀಳುವಾಗ ಏನನ್ನು ವಹಿಸಬೇಕು?

## IX. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ತೋಟದಲ್ಲಿ ಯಾವ ಯಾವ ಹಣ್ಣುಗಳಿವೆ?

2. ಹಣ್ಣಿನ ಗಿಡಗಳನ್ನು ಹೇಗೆ ಬೆಳೆಸಬೇಕು?



## ಚಟುವಟಿಕೆ

1. ಪದ್ಯವನ್ನು ಕಂಠಪಾಠ ಮಾಡಿ (ಅಭಿನಯದೊಂದಿಗೆ ಕಲಿಯಿರಿ).

ಹಣ್ಣುಗಳ ಚಿತ್ರಗಳನ್ನು ಅಂಟಿಸಿ ಹೆಸರಿಸಿ.